

# ಚಾಲಾಕಿ

ಸಣ್ಣ ರಾಜ್ಯ. ಅಲ್ಲಿನ ರಾಜ ಪುಂಡರಿಕ. ಅತ್ಯಂತ ಪ್ರೀತಿಯಿಂದ ತನ್ನ ಜನರ ಯೋಗಕ್ಷೇಮ ನೋಡಿಕೊಳ್ಳುತಿದ್ದ. ಹೀಗಿರಲು ಅಲ್ಲಿನ ರಾಜನ ಆಡಳಿತದಲ್ಲಿ ಸುಂಕದ ಅಧಿಕಾರಿಯ ಕೈಕೆಳಗೆ ಕೆಲಸ ಮಾಡುವ ಒಬ್ಬ ಅಧಿಕಾರಿ ಇದ್ದ. ಆತ ಮಂತ್ರಿಗಳ ದೂರದ ಸಂಬಂಧಿ. ಆತ ವಸೂಲಿ ಮಾಡಿದ ಕಂದಾಯವನ್ನು ಪೂರ್ತಿಯಾಗಿ ಭಂಡಾರಕ್ಕೆ ಜಮಾ ಮಾಡದೇ ಆತನೇ ಇಟ್ಟುಕೊಂಡು ದುರುಪಯೋಗ ಮಾಡುತಿದ್ದ.

ಈ ವಿಷಯವು ಕೆಲ ಆಪ್ತರ ಮೂಲಕ ರಾಜನ ಕಿವಿಗೂ ತಲುಪಿತು. ಆದರೂ ರಾಜನು ಪ್ರತ್ಯಕ್ಷ ಕಾಣುವುದು ಉತ್ತಮವೆಂದು ತಿಳಿದ. ಆ ಬಗ್ಗೆ ಯೋಚಿಸಿದ. ವೇಷ ಮರೆಸಿ ಅಡ್ಡಾಡುತ್ತಿದ್ದಾಗ ಆತನ ನಡೆ ಗಮನಿಸಿದ. ಜನರನ್ನು ರಾಜನ ಹೆಸರಲ್ಲಿ ಹೆದರಿಸಿ ಕಂದಾಯ ವಸೂಲಿ ಮಾಡುತ್ತಿರುವುದನ್ನು ಕಂಡು ಇದನ್ನು ತಡೆಯದೇ ಇದ್ದರೆ ರಾಜ ಮಹಾಪ್ರಜಾ ಪೀಡಕ ಎನ್ನುವಂತೆ ಬಿಂಬಿಸಿ ಮುಂದೆ ರಾಜ್ಯದಲ್ಲಿ ಅರಾಜಕತೆ ಉಂಟಾಗುತ್ತದೆ. ಇದನ್ನು ತಪ್ಪಿಸಲು ಏನಾದರು ಮಾಡಬೇಕೆಂದು ನಿರ್ಧರಿಸಿದ. ಅಂದು ಏನನ್ನೂ ಹೇಳದೆ ನಡೆದ.

ಮರು ದಿವಸ ಆತನನ್ನು ರಾಜ್ಯ ಸಭೆಗೆ ಕರೆಸಿ ಕೊಂಡಾಡಿದ. ತನ್ನ ರಾಜ್ಯದಲ್ಲಿ ಸ್ವಾಮಿನಿಷ್ಠ ಸೇವಕ. ಯಾರೇ ಆಗಲಿ ಕರ ಕೊಡದೇ ಪಾರಾಗುವಂತಿಲ್ಲ. ತನ್ನ ಭಂಡಾರ ಇಂತಹ ಸ್ವಾಮಿನಿಷ್ಠರಿಂದ ತುಂಬಿ ತುಳುಕ್ಕುತ್ತಿದೆ. ಇನ್ನೂ ಹೆಚ್ಚಿನ ಕರ ವಸೂಲಾಗುವಂತಹ ಪ್ರದೇಶದಲ್ಲಿ ಇವರನ್ನು ನೇಮಿಸಿ, ರಾಜ್ಯದ ಭಂಡಾರ ತುಂಬಿಸಿಕೊಳ್ಳುವುದು ಉತ್ತಮ. ಆಪತ್ಕಾಲದಲ್ಲಿ ಜನ ಕಲ್ಯಾಣ ಯೋಜನೆಗಳಿಗೆ ಸಹಾಯಕವಾಗುತ್ತದೆ ಎಂದು ಹೊಗಳಿದ. ಮಂತ್ರಿಗಳನ್ನು ಕರೆದು ಆತನಿಗೆ ಸ್ವತಂತ್ರ ಕಾರ್ಯಭಾರ ಮಾಡಲು ಆದೇಶಿಸಿ ಆತನನ್ನು ಸಮುದ್ರದಂಡೆಯಲ್ಲಿನ ಆಗುಹೋಗುಗಳನ್ನು ನೋಡಿ ವರದಿಮಾಡುವ ಹೊಸ ಹುದ್ದೆ ಸೃಷ್ಟಿಸಿ ಅಲ್ಲಿಗೆ ವರ್ಗ ಮಾಡಲು ತಿಳಿಸಿದ. ಅಲ್ಲಿ ಕುಳಿತು ಅಲ್ಲಿನ ಆಗುಹೋಗುಗಳನ್ನು ವ್ಯಾಪಾರ ವಹಿವಾಟುಗಳ ಬಗ್ಗೆ ಮಾಹಿತಿಯನ್ನು ನೀಡಿದರೆ ಸಾಕು ಎಂದು ಅಧಿಕಾರ ಹಂಚಿಕೆ ಮಾಡಿ ಆತನಿಗೆ ಸತ್ಕರಿಸಿದ. ಮಂತ್ರಿಗಳಿಗೂ ತನ್ನ ಸಂಬಂಧಿಗೆ ಹೆಚ್ಚಿನ ವೇತನದ ಒಳ್ಳೆಯ ಹುದ್ದೆ ನೀಡಿದ್ದಕ್ಕಾಗಿ ಸಂತೋಷವಾಯಿತು.

ಅದಾದ ಕೆಲವು ದಿನಗಳಲ್ಲಿ ಆತ ಹೊಸಹುದ್ದೆಯಲ್ಲಿ ಏನು ಮಾಡುತ್ತಿರಬಹುದೆಂದು ರಾಜನಿಗೆ ಕುತೂಹಲ ಉಂಟಾಯಿತು. ಆದ ಕಾರಣ ಒಂದು ದಿನ ಸಂಜೆ ಎಂದಿನಂತೆ ವೇಷ ಮರೆಸಿಕೊಂಡು ದೂರದಲ್ಲಿ ನಿಂತು ಗಮನಿಸಿದ. ಆತ ಸಮುದ್ರದ ದಂಡೆಯಲ್ಲಿ ಕುಳಿತುಕೊಂಡು, ಒಬ್ಬ ಖಾಸಗಿ ವ್ಯಕ್ತಿಯ ಮೂಲಕ ಸಮುದ್ರ ದಂಡೆಗೆ ಬರುವವರ ಮಾಹಿತಿಯನ್ನು ಪಡೆದುಕೊಳ್ಳುತಿದ್ದ. ಬರುವವರು ಹೊಸಬರು, ಅನುಕೂಲವಂತರಿದ್ದಾರೆಂದು, ವ್ಯಾಪಾರ ಮಾಡುತ್ತಾರೆಂದು ತಿಳಿದರೆ, ಅವರನ್ನು ತನ್ನಲ್ಲಿಗೆ ಕರೆಸಿಕೊಂಡು ರಾಜರು ಹೊಸ ಹುದ್ದೆ ಸೃಷ್ಟಿಸಿರುವುದನ್ನು ರಾಜಪತ್ರದೊಂದಿಗೆ ತೋರಿಸುತ್ತಿದ್ದ. ತನಗೆ ಕಡಿಮೆ ಕೊಟ್ಟರೂ ಸಾಕು ತಪ್ಪದೇ ಕರದ ಬಾಬತ್ತು ನೀಡಬೇಕು. ಇಲ್ಲಾ ರಾಜರ ಆದೇಶದಂತೆ ಹೆಚ್ಚಿನ ಕರ ಕಾಯಂ ಆಗಿ ನೀಡಬೇಕಾಗುತ್ತದೆ ಎಂದು ಹೆದರಿಸಿ, ಮುಂಚಿನದಕ್ಕಿಂತ ಹೆಚ್ಚು ಸಂಪಾದನೆ ಮಾಡುವ ದಾರಿ ಕಂಡುಕೊಂಡಿದ್ದ.

ಹಳೇ ಹುದ್ದೆಗಿಂತ ಆತನ ಆದಾಯ ಹೆಚ್ಚಾಗಿತ್ತು. ಅದೂ ಯಾವುದೇ ಶ್ರಮವಿಲ್ಲದೆ ಕುಳಿತಲ್ಲಿಗೆ ಬರುತಿತ್ತು. ಇದನ್ನು ನೋಡಿ ರಾಜ ದಂಗಾದ! ಮಾರನೇ ದಿನ ಆತನನ್ನು ಅರಮನೆಗೆ ಕರೆಸಿ ಹೊಸಹುದ್ದೆ ಹೇಗಿದೆ? ಅಲ್ಲೇ ಮುಂದುವರಿಯುತ್ತೀರಾ? ಇಲ್ಲ ಊರಲ್ಲಿಯೇ ಬೇರೆ ಹುದ್ದೆ ಬೇಕಾ? ಎಂದು ವಿಶ್ವಾಸದಲ್ಲಿ ಕೇಳಿದ. ಆತ 'ಮಹಾರಾಜರೇ ತಾವು ತನ್ನ ಮೇಲೆ ಕೃಪೆಯಿಟ್ಟು ಹೊಸ ಹುದ್ದೆ ಸಮುದ್ರ ಕಾಯುವುದನ್ನು ಕೊಟ್ಟಿದ್ದೀರಿ. ಅದೇ ಇರಲಿ. ತನಗೂ ವಯಸ್ಸಾಗಿದೆ. ಇಷ್ಟು ದಿವಸ ಕೆಲಸ ಮಾಡಿ ಸಾಕಾಗಿದೆ' ಎಂದು ಕೈಮುಗಿದ.

ರಾಜ ಆತನ ವಂಚನೆಯ ಕುಟಿಲತೆಗೆ ಬೆರಗಾದ. ಆತನ ನೀಚ ಬುದ್ಧಿಗೆ ಹುಸಿ ನಕ್ಕು, ಇಂತವರು ರಾಜ್ಯಕ್ಕೆ ಮಾರಕವಾಗುತ್ತಾರೆ. ವಕ್ರಬುದ್ಧಿಯವರನ್ನು ಸರಿಪಡಿಸಲು ಆಗುವುದಿಲ್ಲ. ಈತನನ್ನು ತನ್ನೆದುರೇ ನಿತ್ಯ ಕುಳಿತು ಮಂತ್ರಿಗಳು ಮತ್ತು ಪ್ರಜೆಗಳ ಅಹವಾಲುಗಳನ್ನು ಬರೆದಿಡುವ ಕೆಲಸಕ್ಕೆ ನಿಯೋಜಿಸುವುದು ಸೂಕ್ತ ಎಂದು ನಿರ್ಧರಿಸಿದ.

■ ರಾಮಕೃಷ್ಣ ಗೋಖಲೆ